Total grant sanctioned to each such institutions.—

1970-71	*1971-72*	*1972-73*
16.44	22.50	20.00 (Budgetted)

(c)

1970-71	*1971-72*	*1972-73*
Scheduled Castes.—		
3,067	5,623	7,389
Scheduled Tribes.—		
137	210	287

ರಾಜ್ಯದಲ್ಲಿ ಅಕ್ರಮವಾಗಿ ಅತಿಕ್ರಮವಾಗಿ ಉಪಯೋಗದಲ್ಲಿದ್ದ ಭೂಮಿ.

ಶ್ರೀ ಎಂ. ಎಚ್ ಜಯಸ್ವಕಾಶ್ ನಾರಾಯಣ (ಶಿಶಿ).— (೧೧೦)

ಕಂದಾಯ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೆ.—

(ಅ) ರಾಜ್ಯದಲ್ಲಿ ಅತಿಕ್ರಮವಾಗಿ ಅಕ್ರಮವಾಗಿ ವಿವಿಧ ರೂಪದಲ್ಲಿರುವ (೧) ಅರಣ್ಯಭೂಮಿ (೨) ಖರಾಬ್ ಭೂಮಿ (ರೆವಿನ್ಯೂ) (೩) ಗೋಮಾಳ ಭೂಮಿ (ರೆವಿನ್ಯೂ) (೪) ಮುಜರಾಯಿ ಭೂಮಿ (ದೇವಸ್ಥಾನಕ್ಕೆ ಸೇರಿದ ಭೂಮಿ)?

ಸರ್ಕಾರದ ಜಮೀನನ್ನು ತಮ್ಮ ಸ್ವಂತ ಉಯೋಗಕ್ಕಾಗಿ ಕಳೆದ ಐದು ವರ್ಷಗಳಿಂದ ಪಡೆದಿರುವರ ಸಂಖ್ಯೆ ಎಷ್ಟು; ಆ ರೀತಿ ಅತಿಕ್ರಮಣ ಹಾಗೂ ಅಕ್ರಮವಾಗಿ ಪಡೆದಿರುವರ ಜಮೀನಿನ ವಿಸ್ತೀರ್ಣವೆಷ್ಟು ?

(ಆ) ಈ ರೀತಿ ಪಡೆದ ಜಮೀನಿನಲ್ಲಿ ಎಷ್ಟು ವಿಸ್ತೀರ್ಣ ಜಮೀನು ಅವರಿಗಾಗಿ ಕೊಟ್ಟು ಕ್ರಮಗೊಳಿಸಲಾಯಿತು ?

(ಇ) ಈ ರೀತಿ ಪಡೆದ ಜಮೀನಿನಲ್ಲಿ ಎಷ್ಟು ವಿಸ್ತೀರ್ಣ ಜಮೀನು ಅವರಿಂದ ಬಿಡುಗಡೆ ಮಾಡಿಸಲ್ಪಟ್ಟಿದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.— (ಕಂದಾಯ ಸಚಿವರು)

ಉತ್ತರ —(ಅ)

		ಎಕರೆ ಗುಂಟೆ
(೧)	ಅರಣ್ಯ ಭೂಮಿ	೩೫,೨೬೫–೦೦
(೨)	ಖರಾಬ್ ಭೂಮಿ	೯೦,೪೬೦–೩೭
(೩)	ಗೋಮಾಳ ಭೂಮಿ	೧,೫೫,೫೨೫–೦೬
(೪)	ಮುಜರಾಯಿ ಭೂಮಿ	೯೭–೨೯
	ಜುಮ್ಲ	೨,೪೧,೩೪೪–೩೨

ತಾರೀಖು ೩೧-೩-೭೩ರಂದು ಸುಮಾರು ೨,೪೯,೬೫೯ ಮಂದಿ ೨,೮೧,೩೪೮ ಎಕರೆ ೩೨ ಗುಂಟೆ ಸರ್ಕಾರಿ ಜಮೀನನ್ನು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದಾರೆ.

(ಆ) ೧೬,೮೩೨ ಎಕರೆ ೨೫ ಗುಂಟೆಗಳು

(ಇ) ೬,೯೧೪ ಎಕರೆ ೯ ಗುಂಟೆಗಳು.

COLLEGE STUDENTS IN BELGAUM DISTRICT.

60.(124) Sri P. P. HEGRE (Chikodi).—Will the Minister for Education be pleased to state:

(a) the total number of students studying in various Colleges in Belgaum District;

(b) of them the number of scheduled castes students in each college (class wise figures may kindly be provided);

(c) the number of scheduled castes students who have been provided with rooms in each of the college hostels;

(d) the number of scheduled castes students who are taking their food in the mess run by the college hostels (collegewise figures may kindly be provided)?

Sri A. R. BADARINARAYANA (Minister for Education).–

(a) 12,779.
(b) 812 (*Vide* statement enclosed)
(c) 135 (*Vide* statement enclosed)
(d) 46 (*Vide* statement enclosed)

ತರೀಕೆರೆ ತಾಲೂಕು ಅಭಿವೃದ್ಧಿ ಮಂಡಲಿಯ ಗ್ರಾಂಟ್ ಹಣದ ದುರುಪಯೋಗ

೬೧. (೧೨೬) ಶ್ರೀ ಹಂಜಿ ಶಿವಣ್ಣ (ತರೀಕೆರೆ).— ಸಮಾಜ ವಿಕಾಸ ಹಾಗೂ ಸಮಾಜ ಕಲ್ಯಾಣ ಮಂತ್ರಿಗಳು ಈ ವಿಷಯಗಳನ್ನು ದಯೆಯಿಟ್ಟು ತಿಳಿಸುವರೇ.—

(ಅ) ತರೀಕೆರೆ ತಾಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರು ಮಾದರಿ ದನಗಳ ಕೊಟ್ಟಿಗೆಯೊಂದನ್ನು ಕಟ್ಟಿರುತ್ತೇನೆಂದು ಸುಳ್ಳು ಆಧಾರದ ಮೇಲೆ ಗೌರ್ನಮೆಂಟ್ ಫ್ರೀ ಗ್ರಾಂಟ್ ಹಣ ದುರುಪಯೋಗ ಮಾಡಿರುವುದು ಸರಕಾರದ ಗಮನಕ್ಕೆ ಬಂದಿದೆಯೇ ?

(ಆ) ಇತ್ತೀಚೆಗೆ ಮುಖ್ಯ ಮಂತ್ರಿಯವರು ಅಧ್ಯಕ್ಷರು ಮತ್ತು ಈ ಬಗ್ಗೆ ಸಂಬಂಧಪಟ್ಟವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಆಜ್ಞೆ ಮಾಡುತ್ತಾರೆಂಬುದು ನಿಜವೇ ?